


ಯಾವುದು ಬದುಕನ್ನು ಕಟ್ಟಿಕೊಡುತ್ತದೆ?

ಯಾವುದು ಭವಿಷ್ಯ ಗಟ್ಟಿ ಮಾಡುತ್ತದೆ?

# ಶಿಕ್ಷಣವೋ? ಉದ್ಯೋಗವೋ?

‘ನನ್ನ ಹೈಸ್ಕೂಲ್ ಫ್ರೆಂಡ್ ಒಬ್ಬ ಎಸ್ಸೆಸ್ಸೆಲ್ಸಿಯಲ್ಲಿ ಫೇಲಾದ. ಸ್ವಲ್ಪ ಜಾಣನಾಗಿದ್ದ ನಾನು ಪದವಿಯಷ್ಟೇ ಅಲ್ಲ, ಡಬಲ್ ಡಿಗ್ರಿವರೆಗೂ ಓದಿದೆ. ಆದರೆ, ಈವರೆಗೂ ನನಗೆ ಒಂದ್ ಮನೆ ಕಟ್ಟಿಸೋಕಾಗಿಲ್ಲ, ಒಂದ್ ಎಕರೆ ಹೊಲ ತಗೊಳ್ಳೋಕೆ ಆಗಿಲ್ಲ. ಆದರೆ, ಎಸ್ಸೆಸ್ಸೆಲ್ಸಿಯಲ್ಲಿ ಫೇಲಾಗಿದ್ದ ನನ್ನ ಫ್ರೆಂಡ್ ಗಾರೆ ಕೆಲಸ ಶುರು ಮಾಡಿ, ನಂತರ ಟೈಲ್ಸ್ ಅಂಗಡಿ ಇಟ್ಟುಕೊಂಡ. ಈಗ ಮನೆ ಕಟ್ಟಿಕೊಂಡು, ಹೊಸ ಕಾರ್ ಎಲ್ಲ ಖರೀದಿ ಮಾಡಿ ಜೀವನದಲ್ಲಿ ಸೆಟಲ್ ಆಗಿದ್ದಾನೆ. ಆದರೆ ನಾನು ತಿಂಗಳಾದರೆ ಸಂಬಳಕ್ಕೆ ಕಾಯುತ್ತಾ, ಹಾಗೋ–ಹೀಗೋ ಜೀವನ ದೂಡುತ್ತಾ ಇದೀನಿ’ ಎನ್ನುತ್ತಾ ಹತಾಶರಾಗಿ ಮಾತನಾಡುತ್ತಿದ್ದರು ಸಹೋದ್ಯೋಗಿಯೊಬ್ಬರು.

‘ಹಾಗಾದರೆ, ಓದೋದೇ ತಪ್ಪಾ?! ಎಸ್ಸೆಸ್ಸೆಲ್ಸಿ, ಪಿಯುಸಿ ಆದ ತಕ್ಷಣ ದುಡಿಯೋಕೆ ಆರಂಭಿಸಬೇಕಾ’ ಎಂಬ ಪ್ರಶ್ನೆ ಮುಂದಿಟ್ಟೆ. ‘ಒಬ್ಬೊಬ್ಬರ ಜೀವನದ ಟೈಮ್‌ಲೈನ್ ಒಂದೊಂದು ರೀತಿ ಇರುತ್ತದೆ. ಶಾಲಾ–ಕಾಲೇಜು ತೊರೆದು ಚಿಕ್ಕ ವಯಸ್ಸಿನಲ್ಲಿಯೇ ದುಡಿಯಲು ಆರಂಭಿಸಿದವರು, ಚಿಕ್ಕದರಲ್ಲಿಯೇ ಹೆಚ್ಚು ದುಡ್ಡು ನೋಡಿ ಹಾಳಾಗಬಹುದು, ಡಬಲ್ ಡಿಗ್ರಿ ಮಾಡಿ, ಪಿಎಚ್‌ಡಿ ಮಾಡಿದವರೂ ಸರಿಯಾದ ಕೆಲಸ ಇಲ್ಲದೆ ಅಲೆಯಬಹುದು. ಜೀವನ ಎತ್ತ ಕರೆದುಕೊಂಡು ಹೋಗುತ್ತೋ ಅತ್ತ ಹೆಜ್ಜೆ ಹಾಕುತ್ತಾ ಸಾಗಬೇಕು’ ಎಂದು ವೇದಾಂತಿಯಂತೆ ಮಾತನಾಡಿದರು ಮತ್ತೊಬ್ಬ ಸಹೋದ್ಯೋಗಿ.